ಹೊಸ್ತಿಲಲ್ಲಿ ಇರಿಸಿದ ಅಕ್ಕಿ ತುಂಬಿದ ಸೇರನ್ನು ಕಾಲಿನಿಂದ ನಯವಾಗಿ ಚಿಮ್ಮಿ ವರನ ಗೃಹಪ್ರವೇಶ ಮಾಡುವಂತೆ ನಾಡನ್ನು ಪ್ರವೇಶಿಸುತ್ತಿದೆ ಶ್ರಾವಣ. ವಧುಪ್ರವೇಶದ ಸಂಭ್ರಮ ನಾಡನ್ನೆಲ್ಲ ಆವರಿಸಿಕೊಂಡಿದೆ. ಈ ಶ್ರಾವಣವಧುವಿನದು ವರ್ಷ ವರ್ಷವೂ ನವೀಕರಣಗೊಳ್ಳುವ ಸಂಭ್ರಮ.

ಆಷಾಢದ ಬೆನ್ನಿಗೆ ಬರುವ ಶ್ರಾವಣ ಮಾಸ ಹತ್ತರಲ್ಲಿ ಹನ್ನೊಂದು ಎನ್ನುವಂಥ ತಿಂಗಳಲ್ಲ. ಬೆಳದಿಂಗಳಿನ ಕಾಂತಿಯನ್ನೂ ಚೆಲುವನ್ನೂ ಒಳಗೊಂಡ ತಿಂಗಳಿದು. ಉಳಿದ್ಯಾವ ಮಾಸಗಳಿಗೂ ಇಲ್ಲದ ಸಂಭ್ರಮ ಈ ಮಾಸದ್ದು. ಆಷಾಢದ ವಿರಹಕ್ಕೆ ಮದ್ದಿನ ರೂಪದಲ್ಲಿ ಪರಿಣಮಿಸುತ್ತದೆ ಶ್ರಾವಣ. ಈ ವಿರಹ ಗಂಡುಹೆಣ್ಣಿಗಷ್ಟೇ ಸೀಮಿತವಾದುದಲ್ಲ; ಆಷಾಢದ ಕಾವಿನಲ್ಲಿ ಒಂದಲ್ಲಾ ಒಂದು ಬಗೆಯಲ್ಲಿ ಇಡೀ ಪ್ರಕೃತಿ ಹಾಗೂ ಸಮಾಜ ವಿರಹದಲ್ಲಿ ಬೇಯುತ್ತಿರುವಂತೆ ಕಾಣಿಸುತ್ತದೆ. ಆ ಬೇಗೆಗೆ ತಂಪೆರೆಯುವುದು ಶ್ರಾವಣ.

ಶ್ರಾವಣದ ಸಂಭ್ರಮಕ್ಕೆ ಎಷ್ಟೊಂದು ಮುಖಗಳು. ಹಿಂದೂಗಳ ಪಾಲಿಗೆ, ಶ್ರಾವಣದ ಆರಂಭವೆನ್ನುವುದು ಹಬ್ಬಗಳ ಋತುವಿನ ಉದ್ಘಾಟನೆಯೇ ಸರಿ. ನಾಗರಪಂಚಮಿ, ಮಂಗಳಗೌರಿ ವ್ರತ, ಕೃಷ್ಣ ಜನ್ಮಾಷ್ಟಮಿ, ರಕ್ಷಾಬಂಧನ, ಲಕ್ಷ್ಮೀಪೂಜೆ – ಹೀಗೆ ಹಬ್ಬಗಳ ಸಾಲೇ ಶ್ರಾವಣದ ನೆಪದಲ್ಲಿ ಅನಾವರಣಗೊಳ್ಳುತ್ತದೆ. ಆಷಾಢದಲ್ಲಿ ಬಿಡುವಿಲ್ಲದಷ್ಟು ಕೃಷಿ ಚಟುವಟಿಕೆಗಳು. ಶ್ರಾವಣದಲ್ಲಿ ಕೊಂಚ ಬಿಡುವು. ಆ ಬಿಡುವಿನ ಕಾರಣದಿಂದಲೇ ಹಬ್ಬಗಳ ಸಂಭ್ರಮ ಚಿಗುರೊಡೆಯುತ್ತದೆ. ಮನೆ ಮನೆಗಳ ಅಂಗಳದಲ್ಲಿ ರಂಗೋಲಿ ಮೂಡುತ್ತದೆ.

ಮನೆಗಳ ಮುಂದೆ ಹೆಣ್ಣುಮಕ್ಕಳು ರಂಗವಲ್ಲಿ ಬಿಡಿಸಿದರೆ, ಶ್ರಾವಣ ಮಾಸ ಪ್ರಕೃತಿಯ ಅಂಗಳದಲ್ಲಿ ಚಿತ್ತಾರ ಮೂಡಿಸುತ್ತದೆ. ಈ ಮಾಸದ ಹಬ್ಬಗಳ ಸಂಭ್ರಮಕ್ಕೆ ಪ್ರಕೃತಿಯೂ ಉತ್ಸಾಹದಿಂದ ಸ್ಪಂದಿಸುವಂತಿರುತ್ತದೆ. ಕಣ್ಣು ಹಾಯಿಸಿದಲ್ಲೆಲ್ಲ ಮಳೆಗಾಲದ ರುಜು ಕಾಣಿಸುತ್ತದೆ. ಬೆಟ್ಟ ಬಯಲುಗಳನ್ನು ಹಬ್ಬಿ ನಗುತ್ತದೆ ಹಸಿರು. ಬೇಸಿಗೆಯಲ್ಲಿ ಬತ್ತಿದ ಕೆರೆಯಂಗಳದಲ್ಲಿ, ನದಿಪಾತ್ರಗಳು ಶ್ರಾವಣದ ವೇಳೆಗೆ ಗಂಗಾವತರಣದಿಂದ ಕನ್ನಡಿಗಳಾಗಿ ಹೊಳೆಯುತ್ತವೆ. ಜಲಧಾರೆಗಳು ಮತ್ತೆ ಬಿರುಸು ಪಡೆದುಕೊಳ್ಳುತ್ತವೆ. ಹೀಗೆ ಇಡೀ ಪ್ರಕೃತಿಯೇ ಮಗ್ಗುಲು ಹೊರಳಿದಂತೆ ಕಂಗೊಳಿಸುವ ಸಂದರ್ಭ ಸಹಜವಾಗಿಯೇ ಹಿಗ್ಗಿಗೆ ಕಾರಣವಾಗುತ್ತದೆ.

ಶ್ರಾವಣ ಬಹುರೂಪಿ ಎಂದೆವಲ್ಲ – ಆ ರೂಪಗಳಲ್ಲಿ ಆಧ್ಯಾತ್ಮಿಕ ಮುಖವೂ ಇದೆ, ಸ್ವಾತಂತ್ರ್ಯದ ಸಂಭ್ರಮವೂ ಇದೆ. ಆಗಸ್ಟ್ 15 ಭಾರತದ ಸ್ವಾತಂತ್ರ್ಯದ ಹಬ್ಬ. ಭಾರತದ ಆಧ್ಯಾತ್ಮಿಕ ಶಿಖರಗಳಲ್ಲೊಂದಾದ ಅರವಿಂದರು ಜನಿಸಿದ್ದು ಶ್ರಾವಣ ಮಾಸದಲ್ಲೇ. ಅಷ್ಟುಮಾತ್ರವಲ್ಲ, ಮಹಾಭಾರತದ ನಾಯಕ ಶ್ರೀಕೃಷ್ಣ ಜನಿಸಿದ 'ಕೃಷ್ಣ ಜನ್ಮಾಷ್ಟಮಿ'ಗೂ ಶ್ರಾವಣವೇ ವೇದಿಕೆ. ಶ್ರಾವಣ ಮಾಸದ ಕೃಷ್ಣ ಪಕ್ಷದ ಅಷ್ಟಮಿಯ ಮಧ್ಯರಾತ್ರಿಯಂದು ಕಂಸನ ಕಾರಾಗೃಹದಲ್ಲಿ ಕೃಷ್ಣ ಜನಿಸಿದನಂತೆ. ಕತ್ತಲನ್ನು ತೊಡೆದು ಬೆಳಕನ್ನು ತರುವವನು ಕೃಷ್ಣ. ಆ ಕೃಷ್ಣನ ಜನನ ಸಂದರ್ಭವನ್ನು ಕವಿ ಜಿ.ಎಸ್. ಶಿವರುದ್ರಪ್ಪನವರು ತಮ್ಮ 'ಕೃಷ್ಣ ಶಕ್ತಿ' ಕವಿತೆಯಲ್ಲಿ ಬಣ್ಣಿಸುವುದು ಹೀಗೆ: 'ಸುತ್ತ–ಮುತ್ತ ಅಂಧಕಾರ / ಮಳೆ ಹನಿಗಳ ಪಂಜರ / ದೈತ್ಯ ಸೆರೆಯ ಕಂಬಿಯೊಳಗೆ / ಬಂತು ದೇವ ಕುಂಜರ'. ಈ ಚಿತ್ರವತ್ತಾದ ಕವಿತೆ ಕಾಣಿಸುವ ಕವಿತೆಯಲ್ಲಿ ಅಂಧಕಾರವನ್ನು ಮಳೆಹನಿಗಳ ಪಂಜರವನ್ನು ಸೀಳುತ್ತ ಸೊಂಡಿಲಾಡಿಸುತ್ತ ದೇವಕುಂಜರ ಬರುತ್ತಿದೆ. ಕೃಷ್ಣರೂಪಿಯಾದ ಈ ದೇವಕುಂಜರದ ಮೂಲಕ ಕವಿ ಗಾಂಧಿಯನ್ನೂ ಸೂಚಿಸುತ್ತಿದ್ದಾರೆ ಎಂದು ಸಾಹಿತ್ಯದ ವಿದ್ಯಾರ್ಥಿಗಳು ಹೇಳುವುದಿದೆ. ಯಾಕಾಗಬಾರದು? ಶ್ರಾವಣ ಸ್ವಾತಂತ್ರ್ಯ ಸಂಭ್ರಮದ ಮಾಸವೂ ಆದುದರಿಂದ, ಆ ಸ್ವಾತಂತ್ರ್ಯದ ಹರಿಕಾರನಾದ ಗಾಂಧಿಯನ್ನೂ ಕೃಷ್ಣನನ್ನೂ ಸಮೀಕರಿಸುವುದು ಅರ್ಥವತ್ತಾಗಿಯೇ ಇದೆ.

ಶ್ರಾವಣದ ಜೊತೆಗೆ ನೆನಪಿಸಿಕೊಳ್ಳಲೇಬೇಕಾದ ಹೆಸರು ಕವಿ ದ.ರಾ. ಬೇಂದ್ರೆ ಅವರದ್ದು. ಕನ್ನಡದ ಮಟ್ಟಿಗೆ ಬೇಂದ್ರೆಯವರಷ್ಟು ಶ್ರಾವಣವನ್ನು ಮೆಚ್ಚಿದ, ಬಣ್ಣಿಸಿದ, ತನ್ನದನ್ನಾಗಿಸಿಕೊಂಡ ಮತ್ತೊಬ್ಬ ಕವಿಯಿಲ್ಲ. ಅವರದು ಶ್ರಾವಣ ಪ್ರತಿಭೆ!

ಬೇಂದ್ರೆಯವರ ಶ್ರಾವಣದ ಬಣ್ಣನೆ ಹೇಗಿದೆಯೆಂದರೆ, ಶ್ರಾವಣದ ಕಾರಣದಿಂದಾಗಿ ಬೇಂದ್ರೆಯವರ ಕಾವ್ಯ ಸೊಗಯಿಸಿತೋ, ಕಾವ್ಯದ

